ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಯಾವ ತರಹದ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಅಧಿಕಾರಿಗಳು ತಮ್ಮ ಮಾತನ್ನು ಕೇಳುತ್ತಿಲ್ಲ. ಈ ಹಂತದಲ್ಲಿ ಸರ್ಕಾರ ವಿಫಲವಾಗಿದೆ. ಅದಕ್ಕೆ ಕಾಂಗ್ರೆಸ್ ಪಕ್ಷದವರೆಲ್ಲರೂ ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಇಂತಹ ಒಂದು ಹೇಳಿಕೆಯಿಂದ ನಮಗೆ ಯಾವುದೂ ತೃಪ್ತಿಯಾಗುತ್ತಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ನಾನು ಇನ್ನೂ ಹೇಳಿಕೆಯನ್ನೇ ಕೊಟ್ಟಿಲ್ಲ. ಸಮಗ್ರವಾದ ಹೇಳಿಕೆಯನ್ನು ನಾಳೆ ಮಾಡಿಸುತ್ತೇನೆಂದು ಹೇಳಿದ್ದೇನೆ.

**ಶ್ರೀ ಎನ್. ಧರ್ಮಸಿಂಗ್** : ಇದು ಜವಾಬ್ದಾರಿಯುತವಲ್ಲ. ಹೇಳಿಕೆಯನ್ನು ಕೊಡಬೇಕಾಗಿತ್ತು. ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿದರು)

**ಶ್ರೀ ಬಿ.ಎಸ್. ಯಡಿಯೂರಪ್ಪ** : ಏನ್ ಸಾರ್ ಈ ರೀತಿ ಮಾತನಾಡಿದರೆ?

**ಅಧ್ಯಕ್ಷರು** : ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕೆ 1 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು 3 ಗಂಟೆ 27 ನಿಮಿಷಕ್ಕೆ ಸೇರಿತು. ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್. ವೈ. ಗೋಪಾಲಕೃಷ್ಣಮಯ) ಅಧ್ಯಕ್ಷ ಪೀಠದಲ್ಲಿದ್ದರು.

## 5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**(ಅ) ವಿಷಯ** : ದಿನಗೂಲಿ ನೌಕರರ ಸಮಸ್ಯೆ ಬಗ್ಗೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** : ಅಧ್ಯಕ್ಷರೇ, ದಿನಗೂಲಿ ನೌಕರರ ಬಗ್ಗೆ ನಾನು ಮಾನ್ಯ ಅಧ್ಯಕ್ಷರಿಗೆ ಒಂದು ಮನವಿ ಸಲ್ಲಿಸಿದ್ದೆ. ಇಲ್ಲಿ ಮಾನ್ಯ ಹಣಕಾಸು ಸಚಿವರೂ ಉಪ ಮುಖ್ಯಮಂತ್ರಿಗಳೂ ಇದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. 16-4-2006 ರಿಂದ ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ರ್ಯಾಲಿ ಮಾಡಿದರು. ಮತ್ತೆ ಮೇ 1ನೇ ತಾರೀಖು ಹುಬ್ಬಳ್ಳಿಯಲ್ಲಿ ನಾನಾ ಭಾಗಗಳಿಂದ ಸುಮಾರು 5 ಸಾವಿರ ಜನ ಮಾನ್ಯ ಪೊರ್ಟ್ಫಿಯವರ ಮನೆ ಮುಂದೆ ಧರಣಿ ಮಾಡಿದರು. ದಿನಗೂಲಿ ನೌಕರರನ್ನು ಖಾಯಂ ಮಾಡಬೇಕು ಎಂದು. 17 ಸಾವಿರ ದಿನಗೂಲಿ ನೌಕರರಿದ್ದಾರೆ. 17 ಸಾವಿರ ಜನರೂ ಬೀದಿಗೆ ಬಂದಿದ್ದಾರೆ, ಹತ್ತಾರು ವರ್ಷಗಳಿಂದ ಇಡೀ ರಾಜ್ಯದ ಅನೇಕ ಇಲಾಖೆಗಳಲ್ಲಿ ಇದ್ದಾರೆ. ಅವರ ಸಂಬಳವೂ ಬಹಳ ಕನಿಷ್ಠ. ಯಾವ ಸವಲತ್ತುಗಳೂ ಇಲ್ಲ. 800-900 ರೂ. ಈ ತರಹ. ಇವರಿಗೆ ರಜೆದಿನಗಳಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಇರುವಾಗ 10-1-2006 ರಲ್ಲಿ ಸುಪ್ರೀಂಕೋರ್ಟ್ ಇವರನ್ನು ಖಾಯಂ ಮಾಡಬಾರದು ಅಂತ ಒಂದು ತೀರ್ಮ ಕೊಡುತ್ತದೆ. ಅದರ ಆಧಾರದ ಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಇವರನ್ನು ಕೆಲಸದಿಂದ ತೆಗೆದುಬಿಡಿ ಎಂದು ಹೇಳುತ್ತಾರೆ. ನನಗನ್ನಿಸುತ್ತದೆ, ಮಾನವೀಯತೆ ದೃಷ್ಟಿಯಿಂದ 17 ಸಾವಿರ